CC-O. In Public Domain. Digitized by eGangotri

# ಮೋಹಮುದ್ಗರ

( ನಿರ್ವಾಣದಶಕದೊಡನೆ )



ಶ್ರೀ ಶಂಕರಭಗವತ್ಪಾದರವರು

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧ್ಯಾತ್ಮಗ್ರಂಥಾವಳಿ

# ಮೋಹಮುದ್ಗರ

( 'ನಿರ್ವಾಣದಶಕ'ವೆಂಬ ಕೃತಿಯೊಡನೆ )

ಅನುವಾದಕರು :
ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೪೬

Sri Vidya Bharathi
Book Centre,
Bharathi Street,
SRINGERI - 577 139

ಅಧ್ಯಾತ್ಮಪ್ರಕಾಶಕಕಾರ್ಯಾಲಯ,
ಹೊಳೆನರಸೀಪುರ.
1989

Sri Vidyabharathi Book Centre, Sringeri

CC-O. In Public Domain. Digitized by eGangotri

ಐದನೆಯ ಮುದ್ರಣ

( ೩೦೦೦ ಪ್ರತಿಗಳು )

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

All Rights Reserved

ಮುದ್ರಣಸ್ಥಾನ :

ಅಧ್ಯಾತ್ಮಪ್ರಕಾಶ ಮುದ್ರಣಾಲಯ,

ಶೃಂಗೇರಿಪುರ

Sri Vidyabharathi Book Centre, Sringeri

CC-O. In Public Domain. Digitized by eGangotri

# ಬಿನ್ನಹ

ಅಧ್ಯಾತ್ಮಪ್ರಕಾಶಕಾರ್ಯಾಲಯವು ಆದರ ಸಂಸ್ಥಾಪಕರ ಇಚ್ಛೆಯಂತೆ ಅಧ್ಯಾತ್ಮಗ್ರಂಥಗಳನ್ನೇ ಪ್ರಕಟಿಸುತ್ತಾ ತನ್ನ ಸೇವೆಯನ್ನು ಮುಂದುವರಿಸಿರುತ್ತದೆ. ಈಚೆಗೆ ಶ್ರೀಶಂಕರಾಚಾರ್ಯರ ಕೃತಿಗಳು, ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರ ಕೃತಿಗಳು, ಇವುಗಳ ಜೊತೆಗೆ ವೈದಿಕಸಾಹಿತ್ಯದಲ್ಲಿ ಸುಪ್ರಸಿದ್ಧವಾಗಿರುವ ಕೆಲವು ಮಂತ್ರಭಾಗಗಳ ಹಾಗೂ ಸೂಕ್ತಗಳ ಸರಳವಾದ ಆಧ್ಯಾತ್ಮಿಕ ವಿವರಣೆಗಳುಳ್ಳ ಪುಸ್ತಕಗಳನ್ನೂ ಪ್ರಕಾಶಗೊಳಿಸುತ್ತಿದೆ. ಇದರಿಂದ ಕರ್ಮ–ಜ್ಞಾನಕಾಂಡಗಳ ಸಮನ್ವಯ ಸಾಮರಸ್ಯಗಳನ್ನು ವಾಚಕರು ಕಂಡುಕೊಳ್ಳಬಹುದಾಗಿದೆ.

ಪ್ರಕೃತ ಈ ಪುಟ್ಟಪುಸ್ತಕವನ್ನು ಶ್ರೀರಂಗಪಟ್ಟಣದಲ್ಲಿರುವ ಭೌತ ಶಾಸ್ತ್ರದ ಉಪನ್ಯಾಸಕರೂ ಬಹುಶ್ರುತರೂ ಆದ ಯೋಗಾಚಾರ್ಯ ಶ್ರೀ|| ಕೆ. ಕೇಶವಮೂರ್ತಿಯವರು ತಮ್ಮ ಪೂಜ್ಯ ತಂದೆಯವರಾದ ದಿವಂಗತ ಗಾವಡಗೆರೆ ಎನ್. ಎಸ್. ಕೃಷ್ಣಪ್ಪನವರ ಹೆಸರಿನಲ್ಲಿ ಸಮರ್ಪಿಸಿರುವ ಒಂದು ಸಾವಿರದ ಒಂದು ರೂಪಾಯಿಗಳ ಉದಾರ ಧನಸಹಾಯದಿಂದ ಹೊರತರಲಾಗಿದೆ. ದಾನಿಗಳು ದಯಮಾಡಿ ಅಧ್ಯಾತ್ಮ ಸಾಹಿತ್ಯ ಪ್ರಚಾರಕ್ಕೆ ಧನಸಹಾಯವನ್ನು ಹೀಗೆಯೇ ಒದಗಿಸಿದಲ್ಲಿ ಇನ್ನೂ ಹೆಚ್ಚಿನ ಸೇವೆಯನ್ನು ಮಾಡಲು ಸಂಸ್ಥೆಗೆ ಸಾಧ್ಯವಾಗುತ್ತದೆ. ಉದಾರಾಶಯರು ಇಚ್ಛಿಸಿದಲ್ಲಿ ಅವರ ದಾನದ ಮೊಬಲಗಿಗೆ ಪ್ರತಿಯಾಗಿ ಗ್ರಂಥಗಳನ್ನು ಪಡೆದು ಸದ್ವಿನಿಯೋಗ ಮಾಡಬಹುದು. ಭಗವಂತನು ದಾನಿಗಳನ್ನು ಈ ಸಾರಸ್ವತಸೇವೆಗೆ ಪ್ರಚೋದಿಸಲಿ–ಎಂದು ಪ್ರಾರ್ಥಿಸಿದೆ.

ಕಾರ್ಯಕಾರಿಸಮಿತಿಯ ಪರವಾಗಿ

ಹೊಳೆನರಸೀಪುರ
ತಾ|| 1–1–89

ಅರಕಲಗೂಡು ತಾಂಡವೇಶ್ವರ,
ಅಧ್ಯಕ್ಷರು.

Sri Vidyabharathi Book Centre, Sringeri

CC-O. In Public Domain. Digitized by eGangotri

# ಮುನ್ನುಡಿ

'ಮೋಹಮುದ್ಗರ'ದ ಐದನೆಯ ಆವೃತ್ತಿಯನ್ನು ವಾಚಕರಿಗೆ ಅರ್ಪಿಸಲು ಬಹಳ ಸಂತೋಷವೆನಿಸಿದೆ. ಇದರ ಹಿಂದಿನ ಕೆಲವು ಆವೃತ್ತಿಗಳು ಪೂಜ್ಯ ಶ್ರೀಶ್ರೀಗಳವರ ಜೀವಿತಕಾಲದಲ್ಲಿಯೇ ಪ್ರಕಟವಾಗಿದ್ದವು. ಈಗ 'ನಿರ್ವಾಣ ದಶಕ'ವೆಂಬ ಮತ್ತೊಂದು ಪುಟ್ಟ ಕೃತಿಯನ್ನೂ ಇಲ್ಲಿ ಅಳವಡಿಸಲಾಗಿದೆ.

ಅನುವಾದಕರ ಅಭಿಪ್ರಾಯದಂತೆ ಜನಾನುರಾಗಕ್ಕೆ ಪಾತ್ರವಾಗಿರುವ ಹಾಡುಗಬ್ಬಗಳಲ್ಲಿ ಇದೂ ಒಂದಾಗಿದ್ದು ಇದರ ಶುದ್ಧಪಾಠವನ್ನಾಗಲಿ, ಪರಿಮಾಣವನ್ನಾಗಲಿ ಗೊತ್ತುಪಡಿಸುವದು ಸಾಧ್ಯವಾಗಿಲ್ಲ– ಎಂಬುದು ಈಗಲೂ ಹಾಗೇ ಉಳಿದುಕೊಂಡಿದೆ. ಶ್ರೀಶಂಕರಾಚಾರ್ಯರು ಇಳಿವಯಸ್ಸಿನ ಒಬ್ಬ ಮೂಢನು ವ್ಯಾಕರಣದ ಧಾತುಪಾಠವನ್ನು ತಪ್ಪಾಗಿ ಗಟ್ಟಿಮಾಡುತ್ತಿದ್ದುದ್ದನ್ನು ಕಂಡು ಕನಿಕರದಿಂದ 'ಅಯ್ಯಾ, ಇದು ನಿನ್ನನ್ನು ಕಾಪಾಡಲಾರದು; ಗೋವಿಂದನನ್ನಾದರೂ ಭಜಿಸು' ಎಂದು ಬೋಧಿಸಿ ಆವನ ಭ್ರಾಂತಿಯನ್ನು ನಿವಾರಣೆಮಾಡಿದ್ದರಿಂದ 'ಮೋಹಮುದ್ಗರ'ವೆಂಬ ಹೆಸರು ಈ ಕೃತಿಗೆ ಬಂದಿದೆ –ಎಂದು ತಿಳಿದುಬಂದಿದೆ.

ವಾಚಕರು ಎಂದಿನಂತೆ ಆದರದಿಂದ ಈ ಪುಸ್ತಕವನ್ನು ಬರಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಇತಿ–

ಪೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,
ಗ್ರಂಥಸಂಪಾದಕ.

Sri Vidyabharathi Book Centre, Sringeri

॥ ಓಂ ॥

CC-O. In Public Domain. Digitized by eGangotri

# ಮೋಹಮುದ್ಗರ

## ೧. ದ್ವಾದಶಮಂಜರಿ

(ಧ್ರುವಪದ)

ಭಜ ಗೋವಿನ್ದಂ ಭಜ ಗೋವಿನ್ದಂ
ಭಜ ಗೋವಿನ್ದಂ[1] ಮೂಢಮತೇ ।
ಸಂಪ್ರಾಪ್ತೇ ಸನ್ನಿಹಿತೇ ಮರಣೇ[2]
ನ ಹಿ ನ ಹಿ ರಕ್ಷತಿ ಡುಕೃಞ್[3] ಕರಣೇ ॥

ಎಲೈ ಮೂಢಬುದ್ಧಿಯವನೆ, ಗೋವಿಂದನನ್ನು ಭಜಿಸು, ಗೋವಿಂದನನ್ನು ಭಜಿಸು, ಗೋವಿಂದನನ್ನೇ ಭಜಿಸು. ಹತ್ತಿರವೇ ಇರುವ ಸಾವು ಒದಗಿತೆಂದರೆ 'ಡುಕೃಞ್ ಕರಣೇ' ಎಂಬ ಈ ನಿನ್ನ ತಪ್ಪುವ್ಯಾಕರಣದ ಜಪವು ನಿನ್ನನ್ನು ಕಾಪಾಡಲಾರದು, ಕಾಪಾಡಲಾರದು.

ಮೂಢ ಜಹೀಹಿ ಧನಾಗಮತೃಷ್ಣಾಂ
ಕುರು ಸದ್ಬುದ್ಧಿಂ[4] ಮನಸಿ ವಿತೃಷ್ಣಾಮ್ ।
ಯೆಲ್ಲಭಸೇ ನಿಜಕರ್ಮೋಪಾತ್ತಂ
ವಿತ್ತಂ ತೇನ ವಿನೋದಯ ಚಿತ್ತಮ್ ॥೧॥

೧. ಮೂಢನೆ, ಹಣವು ಬರಬೇಕೆಂದು ಹಾತುವರಿಯುವದನ್ನು ಕೈಬಿಡು ; ವೈರಾಗ್ಯವೆಂಬ ಉತ್ತಮವಾದ ಬುದ್ಧಿಯನ್ನು ಮನಸ್ಸಿನಲ್ಲಿ ಮಾಡಿಕೊ ; ನಿನ್ನ ಕರ್ಮಕ್ಕನುಗುಣವಾಗಿ ಎಷ್ಟು ಹಣವು ದೊರೆತರೆ ಅಷ್ಟರಿಂದಲೇ ಮನಸ್ಸಿಗೆ ಸಂತೋಷವನ್ನುಂಟುಮಾಡಿಕೊ.

---

1. ಗೋವಿನ್ದಂ ಭಜ ॥ಪಾ॥
2. "ಕಾಲೇ" ಎಂಬ ಪಾಠಕ್ಕಿಂತಲೂ ಇದೇ ಉತ್ತಮ.
3. ಡುಕೃಞ್ ಎಂದು ವ್ಯಾಕರಣದ ರೂಪ; ಆದರೆ ಡುಕುರುಞಾ್ ಎಂಬುದೇ ಇಲ್ಲಿ ಓದಬೇಕಾಪದ್ದು. ಪೀಠಿಕೆಯನ್ನು ನೋಡಿ. 4. ತನುಬುದ್ಧೇ ಪಾ॥

CC-O. In Public Domain. Digitized by eGangotri


ಅಥಮನರ್ಥಂ ಭಾವಯ ನಿತ್ಯಂ
ನಾಸ್ತಿ ತತಃ ಸುಖಲೇಶಃ ಸತ್ಯಮ್ ।
ಪುತ್ರಾದಪಿ ಧನಭಾಜಾಂ ಭೀತಿಃ
ಸರ್ವತ್ರೈಷಾ ವಿಹಿತಾ ರೀತಿಃ ॥೨॥

೨. ಅರ್ಥವು (ಹಣವು) ಎಂಬುದು ನಿಜವಾಗಿ ಅನರ್ಥವು– ಎಂದು ಯಾವಾಗಲೂ ಯೋಚಿಸುತ್ತಿರು ; ನಿಜವಾಗಿ ಅದರಿಂದ ಸುಖವಿಲ್ಲವೇ ಇಲ್ಲ. ಹಣವುಳ್ಳವರಿಗೆ ತಮ್ಮ ಮಗನಿಂದ ಕೂಡ ಆಂಜಿಕೆಯುಂಟು ; ಇದು ಎಲ್ಲೆಲ್ಲಿಯ ಕಂಡುಬಂದಿರುವ ರೀತಿಯಾಗಿರುತ್ತದೆ.[1]

ಕಾ ತೇ ಕಾನ್ತಾ ಕಸ್ತೇ ಪುತ್ರಃ
ಸಂಸಾರೋಽಯಮತೀವ ವಿಚಿತ್ರಃ ।
ಕಸ್ಯ ತ್ವಂ ಕಃ ಕುತ ಆಯಾತ–
ಸ್ತತ್ತ್ವಂ ಚಿನ್ತಯ ತದಿದಂ ಭ್ರಾತಃ[2] ॥೩॥

೩. ನಿನ್ನ ಹೆಂಡತಿ ಯಾರು, ನಿನ್ನ ಮಗನು ಯಾರು ? ಈ ಸಂಸಾರವೆಂಬುದು ಅತ್ಯಂತವಿಚಿತ್ರವಾಗಿರುವದು. ತಮ್ಮ, ನೀನು ಯಾರವನು, ಯಾರು, ಏಕೆ, ಎಲ್ಲಿಂದ ಬಂದೆ ?– ಇದರ ನಿಜವನ್ನು ಯೋಚಿಸಿ ನೋಡಿಕೊ.

ಮಾ ಕುರು ಜನಧನಯೌವನಗರ್ವಂ
ಹರತಿ ನಿಮೇಷಾತ್ ಕಾಲಃ ಸರ್ವಮ್ ।
ಮಾಯಾಮಯಮಿದಮಖಿಲಂ ಹಿತ್ವಾ
ಬ್ರಹ್ಮಪದಂ ತ್ವಂ ಪ್ರವಿಶ ವಿದಿತ್ವಾ[3] ॥೪॥

---

1. "ಸರ್ವತ್ರೈಷಾ ಕಥಿತಾ ನೀತಿ" ಎಂಬ ಪಾಠವೂ ಉಂಟು ; ಆಗ "ಈ ನೀತಿಯನ್ನು ಎಲ್ಲೆಲ್ಲಿಯೂ ಹೇಳಿರುತ್ತದೆ" ಎಂದು ಅರ್ಥಮಾಡಿಕೊಳ್ಳಬೇಕು.

2. "ಭ್ರಾನ್ತಃ" ಎಂಬ ಪಾಠಕ್ಕಿಂತ ಇದೇ ಉತ್ತಮವೆಂಬುದನ್ನು ಅಂತ್ಯ ಪ್ರಾಸದಿಂದ ತಿಳಿಯಬಹುದು.

3. ಪ್ರವಿಶಾಶು ವಿದಿತ್ವಾ ಪಾ॥

Sri Vidyabharathi Book Centre, Sringeri

CC-O. In Public Domain. Digitized by eGangotri


೪. ಆಳುಕಾಳು, ಹಣಕಾಸು, ಪ್ರಾಯ– ಇವುಗಳಿರುವವೆಂದು ಹೆಮ್ಮೆ ಪಡದಿರು ; ಕಾಲವು ಬಂತೆಂದರೆ ಇದೆಲ್ಲವನ್ನೂ ಕಣ್ಣುಮುಚ್ಚಿ ತೆರೆಯುವದರೊಳಗೆ ಕೊಂಡೊಯ್ಯುವದು. ಇದೆಲ್ಲವೂ ಮಾಯಾಮಯವೆಂದು ಕೈಬಿಟ್ಟು ಜ್ಞಾನವನ್ನು ಸಂಪಾದಿಸಿಕೊಂಡು ಬ್ರಹ್ಮಪದವಿಯನ್ನು ಸೇರಿಕೊ.

ಕಾಮಂ ಕ್ರೋಧಂ ಲೋಭಂ ಮೋಹಂ
ತ್ಯಕ್ತ್ವಾऽऽತ್ಮಾನಂ ಭಾವಯ ಕೋऽಹಮ್ ।
ಆತ್ಮಜ್ಞಾನವಿಹೀನಾ ಮೂಢಾ-
ಸ್ತೇ ಪಚ್ಯನ್ತೇ ನರಕನಿಗೂಢಾಃ ॥೫॥

೫. ಆಸೆ, ಸಿಟ್ಟು, ಜಿಪುಣತನ, ಭ್ರಾಂತಿ– ಇವುಗಳನ್ನು ಬಿಟ್ಟು 'ನಾನು ಯಾರು ?' ಎಂದು ನಿನ್ನನ್ನು ನೀನು ತಿಳಿದು ನೋಡಿಕೊ. ಆತ್ಮಜ್ಞಾನವಿಲ್ಲದ ಮೂಢರು ನರಕದಲ್ಲಿ ಬಿದ್ದು ಬೇಯಬೇಕಾಗುವದು.

ಸುರಮನ್ದಿರತರುಮೂಲನಿವಾಸಃ
ಶಯ್ಯಾ ಭೂತಲಮಜಿನಂ ವಾಸಃ ।
ಸರ್ವಪರಿಗ್ರಹಭೋಗತ್ಯಾಗಃ
ಕಸ್ಯ ಸುಖಂ ನ ಕರೋತಿ ವಿರಾಗಃ ॥೬॥

೬. ದೇವಾಲಯವೋ ಮರದ ಬುಡವೋ ಮನೆ ; ನೆಲವೇ ಹಾಸಿಗೆ ; ಕೃಷ್ಣಾಜಿನವೇ ಹೊದಿಕೆ. ಹೀಗೆ ನನ್ನದೆಂಬುದೆಲ್ಲವನ್ನೂ ತೊರೆಯುವ ವೈರಾಗ್ಯವು ಯಾರಿಗೆತಾನೆ ಸುಖವನ್ನುಂಟುಮಾಡಲಾರದು ?

ಶತ್ರೌ ಮಿತ್ರೇ ಪುತ್ರೇ ಬನ್ಧೌ
ಮಾ ಕುರು ಯತ್ನಂ ವಿಗ್ರಹಸನ್ಧೌ ।
ಭವ ಸಮಚಿತ್ತಃ ಸರ್ವತ್ರ ತ್ವಂ
ವಾಞ್ಛಸ್ಯಚಿರಾದ್ಯದಿ ವಿಷ್ಣುತ್ವಮ್ ॥೭॥

೭. ಹಗೆಯಲ್ಲಾಗಲಿ, ಗೆಳೆಯನಲ್ಲಾಗಲಿ, ಮಗನಲ್ಲಾಗಲಿ, ನೆಂಟನಲ್ಲಾಗಲಿ, ಜಗಳವಾಡುವದಕ್ಕೆ ಅಥವಾ ಸ್ನೇಹವನ್ನು ಬೆಳೆಯಿಸಿಕೊಳ್ಳುವದಕ್ಕೆ ಯತ್ನವನ್ನು ಮಾಡಬೇಡ. ಬೇಗ ವಿಷ್ಣುವೇ ಆಗಬೇಕೆಂಬ ಇಚ್ಛೆಯಿದ್ದರೆ ಎಲ್ಲರಲ್ಲಿಯೂ ಸಮಬುದ್ಧಿಯುಳ್ಳವನಾಗಿರು.

CC-O. In Public Domain. Digitized by eGangotri



ತ್ವಯಿ ಮಯಿ ಚಾನ್ಯತ್ರೈಕೋ ವಿಷ್ಣು-
ರ್ವ್ಯರ್ಥಂ ಕುಪ್ಯಸಿ ಮಯ್ಯಸಹಿಷ್ಣುಃ ।
ಸರ್ವಸ್ಮಿನ್ನಪಿ ಪಶ್ಯಾತ್ಮಾನಂ
ಸರ್ವತ್ರೋತ್ಸೃಜ ಭೇದಜ್ಞಾನಮ್ ॥೮॥

೮. ನಿನ್ನಲ್ಲಿಯೂ ನನ್ನಲ್ಲಿಯೂ ಜೇರೆಯ ಕಡೆಯಲ್ಲಿಯೂ ವಿಷ್ಣು ಪ್ರೊಬ್ಬನೇ ಇರುತ್ತಿರುವನು. ಹೀಗಿರುವಲ್ಲಿ ಸುಮ್ಮನೆ ನನ್ನಲ್ಲಿ ಸಹನೆಯಿಲ್ಲದೆ ಏಕೆ ಸಿಟ್ಟುಮಾಡುತ್ತಿದ್ದೀಯೆ ? ಎಲ್ಲರಲ್ಲಿಯೂ ಆತ್ಮನನ್ನೇ ಕಂಡುಕೊ, ಭೇದಜ್ಞಾನವನ್ನು ಎಲ್ಲಿಯೂ ಮಾಡದಿರು.

ಪ್ರಾಣಾಯಾಮಂ ಪ್ರತ್ಯಾಹಾರಂ
ನಿತ್ಯಾನಿತ್ಯವಿವೇಕವಿಚಾರಮ್ ।
ಜಾಪ್ಯಸಮೇತಸಮಾಧಿವಿಧಾನಂ
ಕುರ್ವವಧಾನಂ ಮಹದವಧಾನಮ್[1] ॥೯॥

೯. ಉಸಿರನ್ನು ಸೆಳೆದು ಹಿಡಿಯುವ ಪ್ರಾಣಾಯಾಮವನ್ನೂ ಇಂದ್ರಿಯಗಳನ್ನು ತಡೆಗಟ್ಟುವ ಪ್ರತ್ಯಾಹಾರವನ್ನೂ, ಇದು ನಿತ್ಯವು, ಇದು ಅನಿತ್ಯವು– ಎಂದು ವಿಂಗಡಿಸಿ ತಿಳಿಯುವ ವಿಚಾರವನ್ನೂ, ಜಪದಿಂದೊಡಗೂಡಿ ಸಮಾಧಿಯನ್ನು ಹೊಂದಿರುವ ರೀತಿಯನ್ನೂ ಚೆನ್ನಾಗಿ ಲಕ್ಷ್ಯವಿಟ್ಟು ತಿಳಿದುಕೊ ; ದೊಡ್ಡವರು ಇದರಲ್ಲಿಯೇ ಚಿತ್ತವಿಟ್ಟಿರುವರು.

ನಲಿನೀದಲಗತಜಲಮತಿತರಲಂ
ತದ್ವಜ್ಜೀವಿತಮತಿಶಯಚಪಲಮ್ ।
ವಿದ್ಧಿ ವ್ಯಾಧ್ಯಭಿಮಾನಗ್ರಸ್ತಂ
ಲೋಕಂ ಶೋಕಹತಂ ಚ ಸಮಸ್ತಮ್[2] ॥೧೦॥

೧೦. ತಾವರೆಯ ಎಸಳಿನಲ್ಲಿರುವ ನೀರು ನಿಂತಲ್ಲಿ ನಿಲ್ಲದೆ ಬಹುವಾಗಿ ಓಡಾಡುವಷ್ಟೆ ; ಅದರಂತೆಯೇ ಪ್ರಾಣವೆಂಬುದು ಬಹಳ ಚಂಚಲವಾಗಿರು

1. ಈ ಶ್ಲೋಕವು ಕೆಲವು ಪುಸ್ತಕಗಳಲ್ಲಿ ಚತುರ್ದಶಮಂಜರಿಯಲ್ಲಿವೆ.

2. ಇಲ್ಲಿರುವ ಉತ್ತರಾರ್ಧಕ್ಕೆ "ಕ್ಷಣಮಿಹ ಸಜ್ಜನಸಂಗತಿರೇಕಾ | ಭವತಿ ಭವಾರ್ಣವತರಣೇ ನೌಕಾ" ಎಂಬ ಪಾಠಾಂತರವೂ ಇದೆ.

Sri Vidyabharathi Book Centre, Singeri

CC-O. In Public Domain. Digitized by eGangotri



ವದು. ಜನರೆಲ್ಲರೂ ರೋಗದಂತಿರುವ ಅಭಿಮಾನಕ್ಕೆ ಸಿಕ್ಕಿ ನರಳುತ್ತಿರುವರೆಂದೂ ಶೋಕದ ಹೊಡೆತಕ್ಕೆಡೆಯಾಗಿರುವರೆಂದೂ ತಿಳಿ.[1]

ಕಾ ತೇಽಷ್ಟಾದಶದೇಶೇ ಚಿನ್ತಾ
ವಾತುಲ ತವ ಕಂ ನಾಸ್ತಿ ನಿಯನ್ತಾ ।
ಯಸ್ತ್ವಾಂ ಹಸ್ತೇ ಸುದೃಢನಿಬದ್ಧಂ
ಬೋಧಯತಿ ಪ್ರಭವಾದಿವಿರುದ್ಧಮ್[2] ॥೧೧॥

೧೧. ಹದಿನೆಂಟು ದೇಶಗಳಲ್ಲಿಯೂ ನೀನು ಯೋಚಿಸಿ ಮಾಡತಕ್ಕ ದ್ದೇನಿದೆ ? ಎಲೆ ಹಾಳುಹರಟೆಯವನೆ, ನಿನ್ನನ್ನು ಕೈಹಿಡಿತದಲ್ಲಿಟ್ಟುಕೊಂಡು ಹುಟ್ಟುಹೊಂದುಗಳೇ ಮುಂತಾದವುಗಳಿಲ್ಲದ ತತ್ತ್ವವನ್ನು ನಿನಗೆ ಬೋಧಿಸು ವಾತನು ಯಾರೂ ಇಲ್ಲವೇನು ?

ಗುರುಚರಣಾಮ್ಬುಜನಿರ್ಭರಭಕ್ತಃ
ಸಂಸಾರಾದಚಿರಾದ್ಭವ ಮುಕ್ತಃ ।
ಸೇನ್ದ್ರಿಯಮಾನಸನಿಯಮಾದೇವಂ
ದ್ರಕ್ಷ್ಯಸಿ ನಿಜಹೃದಯಸ್ಥಂ ದೇವಮ್[3] ॥೧೨॥

೧೨. ಶ್ರೀಗುರುವಿನ ಚರಣಕಮಲದಲ್ಲಿ ಅತ್ಯಂತಭಕ್ತಿಯುಳ್ಳವನಾಗಿ, ಈ ಘೋರಸಂಸಾರದಿಂದ ಬೇಗನೆ ಮುಕ್ತನಾಗು. ಈ ರೀತಿಯಲ್ಲಿ ಇಂದ್ರಿಯ ಗಳನ್ನೂ ಮನಸ್ಸನ್ನೂ ಬಿಗಿಹಿಡಿಯುವದರ ಮೂಲಕ, ನಿನ್ನ ಹೃದಯದಲ್ಲಿರುವ ದೇವವನ್ನು ಕಾಣುವೆ.

---

1. ಇಲ್ಲಿ ಪಾಠಾಂತರವಾಗಿ ಹಿಂದಿನ ಪುಟದ ಟಿಪ್ಪಣಿಯಲ್ಲಿ ಕೊಟ್ಟಿರುವ ಭಾಗಕ್ಕೆ ಅರ್ಥವೇನೆಂದರೆ : "ಒಂದು ಕ್ಷಣದ ಮಟ್ಟಿಗೆ ಸಜ್ಜನಸಹವಾಸವನ್ನು ಮಾಡಿದರೂ ಅವೇ ಸಂಸಾರಸಾಗರವನ್ನು ದಾಟುವದಕ್ಕೆ ತೆಪ್ಪವಾಗುವದು.

2. ಈ ಶ್ಲೋಕವು ಕೆಲವು ಮುದ್ರಿತಪುಸ್ತಕಗಳಲ್ಲಿಲ್ಲ ; ಇನ್ನು ಕೆಲವು ಪುಸ್ತಕ ಗಳಲ್ಲಿ ಬಹಳ ಮಾರ್ಪಟ್ಟಿದೆ.

3. ಅನೇಕ ಪುಸ್ತಕಗಳಲ್ಲಿ ಈ ಶ್ಲೋಕವು ಹನ್ನೆರಡನೆಯ ಶ್ಲೋಕದ ಕೊನೆಯಲ್ಲಿದೆ.

Sri Vidyabhathi Foundation, Bangalore. Digitized by eGangotri

CC-O. In Public Domain. Digitized by eGangotri


ದ್ವಾದಶಮಂಜರಿಕಾಮಯ ವಿಷಃ
ಶಿಷ್ಯಾಣಾಂ ಕಥಿತೋ ಹ್ಯುಪದೇಶಃ ।
ಯೇಷಾಂ ಚಿತ್ತೇ ನೈವ ವಿವೇಕ-
ಸ್ತೇ ಪಚ್ಯನ್ತೇ ನರಕಮನೇಕಮ್[1] ॥೧೩॥

೧೩. ದ್ವಾದಶಮಂಜರಿಯ ರೂಪವಾಗಿರುವ ಈ ಉಪದೇಶವನ್ನು ಶಿಷ್ಯರಿಗೆ ಹೇಳಿರುತ್ತದೆ. ಯಾರ ಚಿತ್ತದಲ್ಲಿ ವಿವೇಕವೇ ಇಲ್ಲವೋ, ಅವರು ಅನೇಕ ನರಕಗಳಲ್ಲಿ ಬೇಯಬೇಕಾಗುವದು.

---

## ೨. ಚತುರ್ದಶಮಂಜರಿ

ದಿನಮಪಿ ರಜನೀ[1] ಸಾಯಂ ಪ್ರಾತಃ
ಶಿಶಿರವಸನ್ತೌ ಪುನರಾಯಾತಃ ।
ಕಾಲಃ ಕ್ರೀಡತಿ ಗಚ್ಛತ್ಯಾಯು-
ಸ್ತದಪಿ ನ ಮುಞ್ಚತ್ಯಾಶಾವಾಯುಃ ॥೧॥

೧. ಹಗಲೂ ರಾತ್ರಿಯೂ, ಬೈಗೂ ಬೆಳಗೂ, ಚಳಿಗಾಲವೂ ಬೇಸಗೆಯೂ ಮತ್ತೆ ಮತ್ತೆ ಬರುತ್ತಲೇ ಇರುವವು. ಹೀಗೆ ಕಾಲವು ಆಟ ವಾಡುತ್ತಿರುವದು, ಆಯುಸ್ಸು ಕಳೆದುಹೋಗುತ್ತಿರುವದು; ಆದರೂ ಆಶೆಯ ವಾಯು ಬಿಡುವದೇ ಇಲ್ಲ!

ಅಗ್ರೇ ವಹ್ನಿಃ ಪೃಷ್ಠೇ ಭಾನೂ
ರಾತ್ರೌ ಚಿಬುಕಸಮರ್ಪಿತಜಾನುಃ ।
ಕರತಲಭಿಕ್ಷಸ್ತರುತಲವಾಸ-
ಸ್ತದಪಿ ನ ಮುಞ್ಚತ್ಯಾಶಾಪಾಶಃ ॥೨॥

---

1. ಕೆಲವು ಪುಸ್ತಕಗಳಲ್ಲಿ ಈ ಶ್ಲೋಕವಿಲ್ಲ.
2. ದಿನಯಾಮಿನ್ಯೌ ಪಾ॥

Sri Vidyabharathi Book Centre, Sringeri

CC-O. In Public Domain. Digitized by eGangotri


೨. ಮುಂದೆ ಬೆಂಕಿಯನ್ನು ಹಾಕಿಕೊಂಡು ಕಾಯಿಸಿಕೊಂಡು ಚಳಿಯನ್ನು ಕಳೆದುಕೊಳ್ಳಬೇಕು ; ಹಗಲೆಲ್ಲ ಸೂರ್ಯನ ಬಿಸಿಲಿನಿಂದ ಬೆನ್ನು ಸುಟ್ಟುಕೊಂಡು ಕಾಯಬೇಕು ; ರಾತ್ರಿಯಲ್ಲಿ ಮೊಳಕಾಲಮೇಲೆ ತಲೆಯಿಟ್ಟುಕೊಂಡು ನಿದ್ರೆಹೋಗಬೇಕು ; ತಿರಿದುಣ್ಣುವ ಭಿಕ್ಷವನ್ನು ಕೈಯಲ್ಲಿಯೇ ತಿನ್ನಬೇಕು ; ಮರದ ಬುಡದಲ್ಲಿಯೇ ವಾಸಮಾಡಬೇಕು– ಹೀಗಿದ್ದರೂ ಆಶೆಯ ಕಟ್ಟು ಮಾತ್ರ ಸಡಿಲವಾಗುವದಿಲ್ಲವಲ್ಲ !

ಯಾವದ್ವಿತ್ತೋಪಾರ್ಜನಸಕ್ತ–
ಸ್ತಾವನ್ನಿಜಪರಿವಾರೋ ರಕ್ತಃ ।
ಪಶ್ಚಾಜ್ಜೀವತಿ[1] ಜರ್ಜರದೇಹೇ
ವಾರ್ತಾಂ ಪೃಚ್ಛತಿ ಕೋಽಪಿ ನ ಗೇಹೇ[2] ॥೩॥

೩. ಎಲ್ಲಿಯವರೆಗೆ ಹಣವನ್ನು ಸಂಪಾದಿಸುವದರಲ್ಲಿ ತೊಡಗಿರುವರೋ ಅಲ್ಲಿಯವರೆಗೆ ತನ್ನ ಜನರೆಲ್ಲರೂ ತನ್ನಲ್ಲಿ ಅನುರಾಗವುಳ್ಳವರಾಗಿರುವರು. ಆಮೇಲೆ ಮುಪ್ಪಿನಿಂದ ಜರ್ಜರಿತವಾದ ಮೈಯಿಂದ ಜೀವಿಸುತ್ತಿರುವಾಗ ಮನೆಯಲ್ಲಿ ಯಾರೂ ತನ್ನ ಸುದ್ದಿಯನ್ನು ಕೇಳುವದಿಲ್ಲ.

ಜಟಿಲೋ ಮುಣ್ಡೀ ಲುಞ್ಚಿತಕೇಶಃ
ಕಾಷಾಯಾಮ್ಬರಬಹುಕೃತವೇಷಃ ।
ಪಶ್ಯನ್ನಪಿ ಚ ನ ಪಶ್ಯತಿ ಮೂಢೋ[3]
ಹ್ಯುದರನಿಮಿತ್ತಂ ಬಹುಕೃತವೇಷಃ ॥೪॥

೪. ಜಟೆಯನ್ನು ಧರಿಸಿದವನು, ತಲೆಯನ್ನು ಬೋಳಿಸಿಕೊಂಡಿರುವವನು, ಜುಟ್ಟನ್ನು ಕೀಳಿಸಿಕೊಂಡವನು– ಕಾವಿಯ ಬಟ್ಟೆಯನ್ನುಟ್ಟು ಅಲಂಕರಿಸಿಕೊಂಡವನು. ಇಂಥ ಮೂಢನು ಹೊಟ್ಟೆಯ ಪಾಡಿಗಾಗಿ ಬಗೆಬಗೆಯ ವೇಷಗಳನ್ನು ಹಾಕಿಕೊಂಡಿರುವನು ; ಇವನು ನಿಜವನ್ನು ಕಂಡೂ ಕಾಣದವನು.

---

1. 'ಪಶ್ಚಾದ್ಧಾವತಿ', 'ತದನು ಚ ಜರಯಾ' ಪಾ॥
2. ಈ ಶ್ಲೋಕವು ಕೆಲವು ಪಾಠಗಳಲ್ಲಿಲ್ಲ. 3. ಈ ಪಾಠವು ಏನೋ ಹೆಚ್ಚುಕಡಿಮೆಯಾಗಿರಬೇಕೆಂದು ತೋರುತ್ತದೆ ; ಇಲ್ಲಿ ಅಂತ್ಯಪ್ರಾಸವಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವದ್ಗೀತಾ ಕಿಂಚಿದಧೀತಾ
ಗಙ್ಗಾಜಲಲವಕಣಿಕಾ ಪೀತಾ
ಸಕೃದಪಿ ಯೇನ ಮುರಾರಿಸಮರ್ಚಾ
ಕ್ರಿಯತೇ ತಸ್ಯ ಯಮೇನ ನ ಚರ್ಚಾ ॥೫॥

೫. ಯಾವನು ಭಗವದ್ಗೀತೆಯನ್ನು ಒಂದಿಷ್ಟು ಓದಿರುವನೋ, ಗಂಗೆಯ ನೀರನ್ನು ಒಂದು ತೊಟ್ಟಾದರೂ ಕುಡಿದಿರುವನೋ, ಒಂದು ಸಲವಾದರೂ ವಿಷ್ಣುಪೂಜೆಯನ್ನು ಮಾಡಿರುವನೋ, ಅಂಥವನ ಚರ್ಚೆಯನ್ನು ಯಮನು ಮಾಡನು.

ಅಙ್ಗಂ ಗಲಿತಂ ಪಲಿತಂ ಮುಣ್ಡಂ
ದಶನವಿಹೀನಂ ಜಾತಂ ತುಣ್ಡಮ್ ।
ವೃದ್ಧೋ ಯಾತಿ ಗೃಹೀತ್ವಾ ದಣ್ಡಂ
ತದಪಿ ನ ಮುಞ್ಚತ್ಯಾಶಾಪಿಣ್ಡಮ್ ॥೬॥

೬. ಶರೀರವು ಸಡಿಲವಾಗಿ, ತಲೆಯು ನರೆತು–ಬಾಯ ಹಲ್ಲುಗಳಿಲ್ಲದಂತಾಗಿ ಮುದುಕನಾಗಿ ಕೋಲುಹಿಡಿದುಕೊಂಡು ನಡೆಯುತ್ತಿರುವನು ; ಆದರೂ ಆಸೆಯು ಶರೀರವನ್ನು ಬಿಟ್ಟುಹೋಗುವದಿಲ್ಲ.

ಬಾಲಸ್ತಾವತ್ಕ್ರೀಡಾಸಕ್ತ–
ಸ್ತರುಣಸ್ತಾವತ್ತರುಣೀಸಕ್ತಃ ।
ವೃದ್ಧಸ್ತಾವಚ್ಚಿನ್ತಾಸಕ್ತಃ
ಪರಮೇ ಬ್ರಹ್ಮಣಿ ಕೋಽಪಿ ನ ಸಕ್ತಃ ॥೭॥

೭. ಹುಡುಗನಾಗಿರುವವರೆಗೂ ಆಟದಲ್ಲಿ ಆಸಕ್ತನಾಗಿರುವನು, ಹರೆಯದವನಾಗಿರುವವರೆಗೂ ಹೆಂಗಸಿನಲ್ಲಿ ಆಸಕ್ತನಾಗಿರುವನು ; ಮುದುಕನಾಗಿರುವವರೆಗಂತೂ ಚಿಂತೆಯಲ್ಲಿ ಆಸಕ್ತನಾಗಿರುವನು ; ಇದರಲ್ಲಿ ಯಾವನೊಬ್ಬನೂ ಪರಬ್ರಹ್ಮದಲ್ಲಿ ಆಸಕ್ತನಾಗಿರುವಂತಿಲ್ಲ.

---

1. ಮಗ್ನಃ ಪಾ॥ 2. ಲಗ್ನಃ ಪಾ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪುನರಪಿ ಜನನಂ ಪುನರಪಿ ಮರಣಂ
ಪುನರಪಿ ಜನನೀಜಠರೇ ಶಯನಮ್ ।
ಇಹ ಸಂಸಾರೇ ಬಹುದುಸ್ತಾರೇ
ಕೃಪಯಾಪಾರೇ ಪಾಹಿ ಮುರಾರೇ ॥೮॥

೮. ಮತ್ತೂ ಹುಟ್ಟುವದು, ಮತ್ತೂ ಸಾಯುವದು, ಮತ್ತೂ ತಾಯಿಯ ಹೊಟ್ಟೆಯಲ್ಲಿ ಬಿದ್ದುಕೊಳ್ಳುವದು ; ದಾಟುವದಕ್ಕೆ ಬಲು ಕಷ್ಟವಾಗಿರುವ ಈ ಅಪಾರವಾದ ಸಂಸಾರದಲ್ಲಿ, ಮುರಾರಿಯೆ, ದಯವಿಟ್ಟು ಕಾಪಾಡು !

ಪುನರಪಿ ರಜನೀ ಪುನರಪಿ ದಿವಸಃ
ಪುನರಪಿ ಪಕ್ಷಃ ಪುನರಪಿ ಮಾಸಃ ।
ಪುನರಪ್ಯಯನಂ ಪುನರಪಿ ವರ್ಷ-
ಸ್ತದಪಿ ನ ಮುಞ್ಚತ್ಯಾಶಾವರ್ಷಃ[1] ॥೯॥

೯. ಮತ್ತೂ ರಾತ್ರಿ, ಮತ್ತೂ ಹಗಲು, ಮತ್ತೂ ಪಕ್ಷ, ಮತ್ತೂ ಮಾಸ, ಮತ್ತೂ ಆಯನ, ಮತ್ತೂ ವರ್ಷ. ಹೀಗಿದ್ದರೂ ಆಶೆಯ ಸುರಿ ಮಳೆಯು ಬಿಡುವದಿಲ್ಲ.

---

1. ಈ ಶ್ಲೋಕವು ಕೆಲವು ಪುಸ್ತಕಗಳಲ್ಲಿಲ್ಲ ; ೮, ೯–ಈ ಶ್ಲೋಕಗಳಿರಡರ ಸ್ಥಾನದಲ್ಲಿ ಕೆಲವು ಕಡೆ ಈ ಶ್ಲೋಕವಿದೆ :

"ಯಾವಜ್ಜನನಂ ತಾವನ್ಮರಣಂ
ತಾವಜ್ಜನನೀ ಜಠರೇ ಶಯನಂ
ಇತಿ ಸಂಸಾರೇ ಸ್ಫುಟತರದೋಷಃ
ಕಥಮಿಹ ಮಾನವ ತವ ಸನ್ತೋಷಃ ॥"

ಇದಕ್ಕೆ ಹೀಗೆಂದು ಅರ್ಥ :—

"ಎಲ್ಲಿಯವರೆಗೆ ಹುಟ್ಟು ಇರುವದೋ ಅಲ್ಲಿಯವರೆಗೂ ಸಾವು ಇರುವದು, ಅಲ್ಲಿಯವರೆಗೂ ತಾಯಿಯ ಹೊಟ್ಟೆಯಲ್ಲಿ ಮಲಗಿಕೊಳ್ಳಲೇಬೇಕಾಗುವದು. ಸಂಸಾರದಲ್ಲಿ ಹೀಗೆ ದೋಷವು ಒಡೆದುಮೂಡುತ್ತಿದೆಯಲ್ಲ ! ಮಾನವನೆ, ಇಲ್ಲಿ ನಿನಗೆ ಹೇಗೆ ತೃಪ್ತಿಯಾಗಿದೆ ?"

CC-O. In Public Domain. Digitized by eGangotri



ವಯಸಿ ಗತೇ ಕಃ ಕಾಮವಿಕಾರಃ
ಶುಷ್ಕೇ ನೀರೇ ಕಃ ಕಾಸಾರಃ ।
ನಷ್ಟೇ ದ್ರವ್ಯೇ ಕಃ ಪರಿವಾರೋ
ಜ್ಞಾತೇ ತತ್ತ್ವೇ ಕಃ ಸಂಸಾರಃ ॥೧೦॥

೧೦. ವಯಸ್ಸು ಹೋದಮೇಲೆ ಕಾಮವಿಕಾರವೆಂಥದ್ದು ? ನೀರು ಒಣಗಿದಮೇಲೆ ಕೆರೆಯೆಂಥದ್ದು ? ಹಣವು ಹೋದಮೇಲೆ ಪರಿವಾರವೆಂಥದ್ದು ? ತತ್ತ್ವವನ್ನರಿತಮೇಲೆ ಸಂಸಾರವೆಂಥದ್ದು ?

ನಾರೀಸ್ತನಭರನಾಭೀದೇಶಂ
ದೃಷ್ಟ್ವಾ ಮಾ ಗಾ ಮೋಹಾವೇಶಮ್ ।
ಏತನ್ಮಾಂಸವಸಾದಿವಿಕಾರಂ
ಮನಸಿ ವಿಚಿನ್ತಯ ವಾರಂ ವಾರಮ್ ॥೧೧॥

೧೧. ಸ್ತ್ರೀಯಳ ದಪ್ಪನಾವ ಕುಚವನ್ನೂ ಹೊಕ್ಕಳಿನ ಪ್ರದೇಶವನ್ನೂ ಕಂಡು ಭ್ರಾಂತಿಯ ಆವೇಶವನ್ನು ಹೊಂದದಿರು. ಇದು ಮಾಂಸಮಜ್ಜಾದಿಗಳ ಕಾರ್ಯವೆಂಬುದನ್ನು ಮನಸ್ಸಿನಲ್ಲಿ ಮತ್ತೆ ಮತ್ತೆ ಚಿಂತಿಸುತ್ತಿರು.

ಕಸ್ತ್ವಂ ಕೋಽಹಂ ಕುತ ಆಯಾತಃ
ಕಾ ಮೇ ಜನನೀ ಕೋ ಮೇ ತಾತಃ ।
ಇತಿ ಪರಿಭಾವಯ ಸರ್ವಮಸಾರಂ
ವಿಶ್ವಂ ತ್ಯಕ್ತ್ವಾ ಸ್ವಪ್ನವಿಚಾರಮ್ ॥೧೨॥

೧೨. ನೀನು ಯಾರು? ಸ್ವಪ್ನವಿಚಾರಕ್ಕೆ ಸಮನಾಗಿರುವ ಈ ಪ್ರಪಂಚವನ್ನೆಲ್ಲ ಸಾರವಿಲ್ಲದ್ದೆಂದು ಕೈಬಿಟ್ಟು, 'ನಾನು ಯಾರು, ಎಲ್ಲಿಂದ ಬಂದಿರುವೆನು? ನನ್ನ ತಾಯಿ ಯಾರು, ತಂದೆ ಯಾರು ?'–ಎಂಬಿದನ್ನು ಚೆನ್ನಾಗಿ ಯೋಚಿಸು.

ಗೇಯಂ ಗೀತಾನಾಮಸಹಸ್ರಂ
ಧ್ಯೇಯಂ ಶ್ರೀಪತಿರೂಪಮಜಸ್ರಮ್ ।
ನೇಯಂ ಸಜ್ಜನಸಙ್ಗೇ ಚಿತ್ತಂ
ದೇಯಂ ದೀನಜನಾಯ ಚ ವಿತ್ತಮ್ ॥೧೩॥

CC-O. Jagadguru Shri Shivarathri Deshikendra Mahaswamiji Oriental Research Institute, Sirigeri

CC-O. In Public Domain. Digitized by eGangotri

೧೩. ಗೀತೆಯನ್ನೂ ಸಹಸ್ರನಾಮವನ್ನೂ ಗಾನಮಾಡಬೇಕು ; ಲಕ್ಷ್ಮೀಪತಿಯಾದ ಶ್ರೀ ಮಹಾವಿಷ್ಣುವಿನ ರೂಪವನ್ನು ಯಾವಾಗಲೂ ಧ್ಯಾನಮಾಡಬೇಕು ; ಸತ್ಪುರುಷರ ಸಹವಾಸದಲ್ಲಿ ಚಿತ್ತವನ್ನು ತಂದುಕೊಳ್ಳಬೇಕು ; ಮತ್ತು ಬಡವರಿಗೆ ಹಣವನ್ನು ಕೊಡಬೇಕು.

ಯಾವತ್ಪವನೋ[1] ನಿವಸತಿ ದೇಹೇ
ಕುಶಲಂ ತಾವತ್ಪೃಚ್ಛತಿ ಗೇಹೇ ।
ಗತವತಿ ವಾಯೌ ದೇಹಾಪಾಯೇ
ಭಾರ್ಯಾ ಬಿಭ್ಯತಿ ತಸ್ಮಿನ್ ಕಾಯೇ ॥೧೪॥

೧೪. ದೇಹದಲ್ಲಿ ಪ್ರಾಣವಿರುವವರೆಗೂ ಮನೆಯಲ್ಲಿ ಹೆಂಡತಿಯು 'ಕ್ಷೇಮವೆ ?' ಎಂದು ಕೇಳುತ್ತಿರುತ್ತಾಳೆ ; ದೇಹವನ್ನು ಬಿಟ್ಟು ಪ್ರಾಣವು ಹೋಗಲಾಗಿ, ಆವಳೇ ಆ ಶರೀರಕ್ಕೆ ಹೆದರುತ್ತಾಳೆ.

ಸುಖತಃ ಕ್ರಿಯತೇ ರಾಮಾಭೋಗಃ
ಪಶ್ಚಾದ್ಧನ್ತ ಶರೀರೇ ರೋಗಃ ।
ಯದ್ಯಪಿ ಲೋಕೇ ಮರಣಂ ಶರಣಂ
ತದಪಿ ನ ಮುಞ್ಚತಿ ಪಾಪಾಚರಣಮ್ ॥೧೫॥

೧೫. ಸುಖಕ್ಕಾಗಿ ಸ್ತ್ರೀಸಂಭೋಗವನ್ನು ಮಾಡುತ್ತಾರೆ ; ಆದರೆ ಆಯ್ಯೋ ! ಆಮೇಲೆ ಶರೀರದಲ್ಲಿ ರೋಗವುಂಟಾಗುತ್ತದೆಯಲ್ಲ ! ಲೋಕದಲ್ಲಿ ಸಾವೇ ಶರಣೆಂದು ತೋರುವಾಗಲೂ ಪಾಪವನ್ನು ಮಾಡುವದನ್ನು ಬಿಡುವದಿಲ್ಲವಲ್ಲ !

ರಥ್ಯಾಕರ್ಪಟವಿರಚಿತಕನ್ಥಃ
ಪುಣ್ಯಾಪುಣ್ಯವಿವರ್ಜಿತಪನ್ಥಃ (?) ।
ಯೋಗೀ ಯೋಗನಿಯೋಜಿತಚಿತ್ತೋ
ರಮತೇ ಬಾಲೋನ್ಮತ್ತವದೇವ[2] ॥೧೬॥

---

1. 'ಯಾವಜ್ಜೀವೋ' ಪಾ॥

2. ಈ ಪಾಠದಲ್ಲಿ ಅಂತ್ಯಪ್ರಾಸವಿಲ್ಲ. "ನಾಹಂ ನ ತ್ವಂ ನಾಯಂ ಲೋಕಃ । ತದಪಿ ಕಿಮರ್ಥಂ ಕ್ರಿಯತೇ ಶೋಕಃ" ಎಂದು ಪಾ॥ ಈ ಶ್ಲೋಕದ ಪೂರ್ವಾರ್ಧಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri


೧೬. ಬೀದಿಯಲ್ಲಿ ಬಿದ್ದಿರುವ ಆರಿವೆಯ ತುಂಡಿನಿಂದ ಕೌಪೀನವನ್ನು ಮಾಡಿಕೊಂಡು, ಪುಣ್ಯಾಪುಣ್ಯಗಳನ್ನು ಮೀರಿರುವ ಹಾದಿಯಲ್ಲಿ ನಡೆಯುತ್ತಾ ಯೋಗದಲ್ಲಿಯೇ ಚಿತ್ತವನ್ನಿಟ್ಟಿರುವ ಯೋಗಿಯು ಹುಡುಗನಂತೆಯೂ ಹುಚ್ಚನಂತೆಯೂ ಆಡುತ್ತಿರುವನು.

ಕುರುತೇ ಗಙ್ಗಾಸಾಗರಗಮನಂ
ವ್ರತಪರಿಪಾಲನಮಥವಾ ದಾನಮ್ ।
ಜ್ಞಾನವಿಹೀನಃ ಸರ್ವಮತೇನ
ಮುಕ್ತಿಂ ನ ಭಜತಿ[1] ಜನ್ಮಶತೇನ ॥೧೭॥

೧೭. ಗಂಗಾನದಿಗೆಂದೂ ಸಮುದ್ರಸ್ನಾನಕ್ಕೆಂದೂ ಯಾತ್ರೆ ಹೊರಡಲಿ, ವ್ರತಗಳನ್ನು ನಡೆಯಿಸಲಿ, ದಾನವನ್ನು ಮಾಡಲಿ, ಆತ್ಮಜ್ಞಾನವಿಲ್ಲದವನಾಗಿದ್ದರೆ ನೂರು ಜನ್ಮಗಳಾದರೂ ಮುಕ್ತಿಯನ್ನು ಹೊಂದಲಾರನೆಂಬುದು ಎಲ್ಲರಿಗೂ ಸಮ್ಮತವಾಗಿರುವದು.

ಸತ್ಸಙ್ಗತ್ವೇ ನಿಸ್ಸಙ್ಗತ್ವಂ
ನಿಸ್ಸಙ್ಗತ್ವೇ ನಿರ್ಮೋಹತ್ವಮ್ ।
ನಿರ್ಮೋಹತ್ವೇ ನಿಶ್ಚಲಿತತ್ವಂ
ನಿಶ್ಚಲಿತತ್ವೇ ಜೀವನ್ಮುಕ್ತಿಃ[2] ॥೧೮॥

೧೮. ಸತ್ಪುರುಷರ ಸಂಗದಿಂದ ವಿಷಯದಲ್ಲಿ ಆಸಕ್ತಿಯು ಹೋಗುವದು; ವಿಷಯಾಸಕ್ತಿಯಿಲ್ಲದಿದ್ದರೆ ಮೋಹವೂ ನಾಶವಾಗುವದು; ಮೋಹವು ಹೋದರೆ ಮನಸ್ಸು ನಿಶ್ಚಲವಾಗುವದು; ನಿಶ್ಚಲಮನಸ್ಸಿನವನಾದರೆ ಜೀವನ್ಮುಕ್ತನಾಗುವನು.

---

ಬದಲು ಕೆಲವು ಪುಸ್ತಕಗಳಲ್ಲಿ : "ಅಷ್ಟಕುಲಾಚಲಸಪ್ತಸಮುದ್ರಾಃ । ಬ್ರಹ್ಮಪುರಂದರ ದಿನಕರರುದ್ರಾಃ ॥" ಎಂಬ ಪಾಠವುಂಟು.

1. "ಮುಕ್ತೋ ನ ಭವತಿ" ಪಾ॥
2. ಇಲ್ಲಿ ಅಂತ್ಯಪ್ರಾಸವಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri


ಯೋಗರತೋ ವಾ ಭೋಗರತೋ ವಾ
ಸಙ್ಗರತೋ ವಾ ಸಙ್ಗವಿಹೀನಃ ।
ಯಸ್ಯ ಬ್ರಹ್ಮಣಿ ರಮತೇ ಚಿತ್ತಂ
ನನ್ದತಿ ನನ್ದತಿ ನನ್ದತ್ಯೇವ[1] ॥೧೯॥

೧೯. ಯೋಗದಲ್ಲಿ ನಿರತನಾಗಿರಲಿ, ಭೋಗದಲ್ಲಿ ನಿರತನಾಗಿರಲಿ, ಯಾವಾತನ ಮನಸ್ಸು ಬ್ರಹ್ಮದಲ್ಲಿ ರಮಿಸುತ್ತಿರುವದೋ ಆವನು ಆನಂದದಿಂದಿರುವನು, ಆನಂದದಿಂದಿರುವನು, ಆನಂದದಿಂದಲೇ ಇರುವನು.

ಇಲ್ಲಿಗೆ ಮೋಹಮುದ್ಗರವು ಮುಗಿಯಿತು.

---

## ನಿರ್ವಾಣದಶಕಮ್

ನ ಭೂಮಿರ್ನ ತೋಯಂ ನ ತೇಜೋ ನ ವಾಯು
ರ್ನ ಖಂ ನೇನ್ದ್ರಿಯಂ ವಾ ನ ತೇಷಾಂ ಸಮೂಹಃ ।
ಅನೈಕಾನ್ತಿಕತ್ವಾತ್ ಸುಷುಪ್ತ್ಯೇಕಸಿದ್ಧ
ಸ್ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥೧॥

೧. (ನಾನು) ಪೃಥ್ವಿಯಲ್ಲ, ಅಪ್ಪಲ್ಲ, ತೇಜಸ್ಸಲ್ಲ, ವಾಯುವಲ್ಲ, ಆಕಾಶವಲ್ಲ, ಇಂದ್ರಿಯವಲ್ಲ, ಅವುಗಳ ಸಮೂಹವೂ ಅಲ್ಲ. ಏಕೆಂದರೆ ಅವು ಅನೈಕಾಂತಿಕವಾಗಿವೆ.[2] ಆದ್ದರಿಂದ ಸುಷುಪ್ತಿಯಲ್ಲಿ ತಾನೊಬ್ಬನೇ ಉಳಿದು ಸಿದ್ಧನಾಗಿರುವ ಕೇವಲ ಶಿವನೇ ನಾನು.

ನ ವರ್ಣಾ ನ ವರ್ಣಾಶ್ರಮಾಚಾರಧರ್ಮಾ
ನ ಮೇ ಧಾರಣಾಧ್ಯಾನಯೋಗಾದಯೋಽಪಿ ।
ಅನಾತ್ಮಾಶ್ರಯಾಹಂಮಮಾಧ್ಯಾಸಹಾನಾ–
ತ್ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥೨॥

---

1. ಈ ಶ್ಲೋಕದಲ್ಲಿಯೂ ಅಂತ್ಯಪ್ರಾಸವಿಲ್ಲ.
2. ವ್ಯಭಿಚರಿತಸ್ವರೂಪವುಳ್ಳದ್ದಾಗಿವೆ, ಒಂದೇ ಸ್ವರೂಪದಲ್ಲಿ ತೋರುತ್ತಿರುವದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri


೩. ನನಗೆ ವರ್ಣಗಳಿಲ್ಲ, ವರ್ಣಾಶ್ರಮಾಚಾರಧರ್ಮಗಳೂ ಇಲ್ಲ ; ಧಾರಣೆ, ಧ್ಯಾನ, ಯೋಗ– ಮುಂತಾದವೂ ಇಲ್ಲ. ಏಕೆಂದರೆ ಅನಾತ್ಮವನ್ನು ಆಶ್ರಯಿಸಿಕೊಂಡಿರುವ ನಾನು, ನನ್ನದು ಎಂಬ ಅಧ್ಯಾಸವು ನಾಶವಾಗಿಬಿಟ್ಟಿರುತ್ತದೆ. ಆದ್ದರಿಂದ ತಾನೊಬ್ಬನೇ ಉಳಿದುಕೊಂಡಿರುವ ಕೇವಲ ಶಿವನೇ ನಾನು.

ನ ಮಾತಾ ಪಿತಾ ವಾ ನ ದೇವಾ ನ ಲೋಕಾ
ನ ವೇದಾ ನ ಯಜ್ಞಾ ನ ತೀರ್ಥಂ ಬ್ರುವನ್ತಿ ।
ಸುಷುಪ್ತಾ ನಿರಸ್ತಾತಿಶೂನ್ಯಾತ್ಮಕತ್ವಾತ್
ತದೇಕೋऽವಶಿಷ್ಟಃ ಶಿವಃ ಕೇವಲೋऽಹಮ್ ॥೩॥

೪. ( ನನಗೆ ) ತಾಯಿಯಿಲ್ಲ, ತಂದೆಯಿಲ್ಲ, ದೇವತೆಗಳಿಲ್ಲ, ಲೋಕಗಳಿಲ್ಲ, ವೇದಗಳಿಲ್ಲ, ಯಜ್ಞಗಳಿಲ್ಲ, ತೀರ್ಥವೂ ಇಲ್ಲವೆನ್ನುವರು. ಸುಷುಪ್ತಿಯಲ್ಲಿ ಅತಿಶೂನ್ಯಾತ್ಮಕತ್ವವನ್ನು ನಿರಾಸಮಾಡಿರುವದರಿಂದ ತಾನೊಬ್ಬನೇ ಉಳಿದುಕೊಂಡಿರುವ ಕೇವಲ ಶಿವನೇ ನಾನು.

ನ ಸಾಂಖ್ಯಂ ನ ಶೈವಂ ನ ತತ್ಪಾಞ್ಚರಾತ್ರಂ
ನ ಜೈನಂ ನ ಮಾನಮಾಂಸಕಾದೇರ್ಮತಂ ವಾ ।
ವಿಶಿಷ್ಟಾನುಭೂತ್ಯಾ ವಿಶುದ್ಧಾತ್ಮಕತ್ವಾತ್
ತದೇಕೋऽವಶಿಷ್ಟಃ ಶಿವಃ ಕೇವಲೋऽಹಮ್ ॥೪॥

೪. ಆ (ಆತ್ಮತತ್ತ್ವವು) ಸಾಂಖ್ಯವಲ್ಲ, ಶೈವವಲ್ಲ, ಪಾಂಚರಾತ್ರವಲ್ಲ, ಜೈನವಲ್ಲ, ಮಾಮಾಂಸಕಾದಿಸಂಮತವಾದದ್ದೂ ಆಲ್ಲ ; ಏಕೆಂದರೆ ಅದು ವಿಶಿಷ್ಟವಾದ ಅನುಭೂತಿಯಿಂದ ವಿಶುದ್ಧಸ್ವರೂಪವಾಗಿರುತ್ತದೆ. ಆದ್ದರಿಂದ ತಾನೊಬ್ಬನೇ ಉಳಿದಿರುವ ಕೇವಲ ಶಿವನೇ ನಾನು.

ನ ಚೋರ್ದ್ವಂ ನ ಚಾಧೋ ನ ಚಾನ್ತರ್ನ ಬಾಹ್ಯಂ
ನ ಮಧ್ಯಂ ನ ತಿರ್ಯಙ್ನ ಪೂರ್ವಾ ಪರಾ ದಿಕ್ ।
ವಿಯದ್ವ್ಯಾಪಕತ್ವಾದಖಣ್ಡೈಕರೂಪ
ಸ್ತದೇಕೋऽವಶಿಷ್ಟಃ ಶಿವಃ ಕೇವಲೋऽಹಮ್ ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri



೫. ಮೇಲುಗಡೆಯಿಲ್ಲ, ಕೆಳಗೆ ಇಲ್ಲ ; ಒಳಗೆ ಇಲ್ಲ, ಹೊರಗೂ ಇಲ್ಲ; ನಡುವೆಯೂ ಇಲ್ಲ. ಅಡ್ಡಲಾಗಿಲ್ಲ, ಪೂರ್ವಪಶ್ಚಿಮದಿಕ್ಕುಗಳಲ್ಲಿಯೂ ಇಲ್ಲ. ಆಕಾಶವನ್ನು ಕೂಡ ವ್ಯಾಪಿಸಿಕೊಂಡಿರುವದರಿಂದ ಅಖಂಡವಾದ ಏಕರೂಪ ನಾಗಿರುವವನು. ಆದ್ದರಿಂದ ತಾನೊಬ್ಬನೇ ಉಳಿದುಕೊಂಡಿರುವ ಕೇವಲ ಶಿವನು ನಾನು.

ನ ಶುಕ್ಲಂ ನ ಕೃಷ್ಣಂ ನ ರಕ್ತಂ ನ ಪೀತಂ
ನ ಕುಬ್ಜಂ ನ ಪೀನಂ ನ ಹ್ರಸ್ವಂ ನ ದೀರ್ಘಮ್ ।
ಅರೂಪಂ ತಥಾ ಜ್ಯೋತಿರಾಕಾರಕತ್ವಾತ್
ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥೬॥

೬. (ಆತ್ಮತತ್ತ್ವವು) ಬಿಳಿಯದಲ್ಲ, ಕಪ್ಪಲ್ಲ ; ಕೆಂಪಲ್ಲ, ಹಳದಿಯಲ್ಲ; ಸಣ್ಣವಲ್ಲ, ದೊಡ್ಡದಲ್ಲ ; ಮೋಟಲ್ಲ. ಉದ್ದವೂ ಅಲ್ಲ. ಹಾಗೆಯೇ ಅದು ಯಾವ ರೂಪವೂ ಇಲ್ಲದ್ದು. ಏಕೆಂದರೆ ಜೈತನ್ಯಜ್ಯೋತಿಯ ಸ್ವರೂಪವಾಗಿರುತ್ತದೆ. ಆದ್ದರಿಂದ ತಾನೊಬ್ಬನೇ ಉಳಿದಿರುವ ಕೇವಲ ಶಿವನು ನಾನು.

ನ ಶಾಸ್ತಾ ನ ಶಾಸ್ತ್ರಂ ನ ಶಿಷ್ಯೋ ನ ಶಿಕ್ಷಾ
ನ ಚ ತ್ವಂ ನ ಚಾಽಹಂ ನ ಚಾಽಯಂ ಪ್ರಪಞ್ಚಃ ।
ಸ್ವರೂಪಾವಬೋಧೋ ವಿಕಲ್ಪಾಸಹಿಷ್ಣು
ಸ್ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥೭॥

೭. (ನಾನು) ಗುರುವಲ್ಲ, ಶಾಸ್ತ್ರವಲ್ಲ, ಶಿಷ್ಯನಲ್ಲ, ಶಿಕ್ಷಣವೂ ಅಲ್ಲ. ನೀನಲ್ಲ, ನಾನಲ್ಲ, ಈ ಪ್ರಪಂಚವೂ ಅಲ್ಲ. ಯಾವ ವಿಕಲ್ಪವನ್ನೂ ಸಹಿಸದ ಸ್ವರೂಪಜೈತನ್ಯವೇ ನಾನು. ಆದ್ದರಿಂದ ತಾನೊಬ್ಬನೇ ಉಳಿದುಕೊಂಡಿರುವ ಕೇವಲ ಶಿವನು ನಾನು.

ನ ಜಾಗ್ರನ್ನ ಮೇ ಸ್ವಪ್ನಕೋ ವಾ ಸುಷುಪ್ತಿ
ರ್ನ ವಿಶ್ವೋ ನ ವಾ ತೈಜಸಃ ಪ್ರಾಜ್ಞಕೋ ವಾ ।
ಅವಿದ್ಯಾತ್ಮಕತ್ವಾತ್ತ್ರಯಾಣಾಂ ತುರೀಯ
ಸ್ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥೮॥

CC-O. In Public Domain. Digitized by eGangotri

CC-O. In Public Domain. Digitized by eGangotri


೮. ನನಗೆ ಎಚ್ಚರವಿಲ್ಲ, ಕನಸಿಲ್ಲ, ತನಿಸಿಪ್ರೆಯಿಲ್ಲ; ನಾನು ವಿಶ್ವನಲ್ಲ, ತೈಜಸನಲ್ಲ, ಪ್ರಾಜ್ಞನಲ್ಲ. ಏಕೆಂದರೆ ಇವು ಮೂರೂ ಅವಿದ್ಯಾತ್ಮಕವಾಗಿರುತ್ತವೆ, ನಾಲ್ಕನೆಯವನೇ ನಾನು, ಆದ್ದರಿಂದ ತಾನೊಬ್ಬನೇ ಉಳಿದುಕೊಂಡಿರುವ ಕೇವಲ ಶಿವನು ನಾನು.

ಅಪಿ ವ್ಯಾಪಕತ್ವಾದ್ಧಿತತ್ವಪ್ರಯೋಗಾತ್
ಸ್ವತಃಸಿದ್ಧಭಾವಾದನನ್ಯಾಶ್ರಯತ್ವಾತ್ ।
ಜಗತ್ತುಚ್ಛಮೇತತ್ಸಮಸ್ತಂ ತದನ್ಯ
ಸ್ತದೇಕೋಽವಶಿಷ್ಟಃ ಶಿವಃ ಕೇವಲೋಽಹಮ್ ॥೯॥

೯. (ಆತ್ಮನು) ವ್ಯಾಪಕನಾಗಿರುವದರಿಂದಲೂ ಹಿತತ್ವದ ಸಂಬಂಧವಿರುವದರಿಂದಲೂ ಸ್ವತಃಸಿದ್ಧತ್ವವಿರುವದರಿಂದಲೂ ಅವನಿಗೆ ಮತ್ತೊಂದು ಆಶ್ರಯವಿಲ್ಲದ್ದರಿಂದಲೂ, ಅವನಿಗಿಂತ ಬೇರೆಯಾದ ಈ ಜಗತ್ತೆಲ್ಲವೂ ತುಚ್ಛವೇ. ಆದ್ದರಿಂದ ತಾನೊಬ್ಬನೇ ಎಲ್ಲವನ್ನೂ ಕಳೆದುಳಿದಿರುವ ಕೇವಲ ಶಿವನು ನಾನು.

ನ ಚೈಕಂ ತದನ್ಯದ್ದ್ವಿತೀಯಂ ಕುತಃ ಸ್ಯಾ
ನ್ನ ವಾ ಕೇವಲತ್ವಂ ನ ಚಾಽಕೇವಲತ್ವಮ್ ।
ನ ಶೂನ್ಯಂ ನ ಚಾಽಶೂನ್ಯಮದ್ವೈತಕತ್ವಾತ್
ಕಥಂ ಸರ್ವವೇದಾನ್ತಸಿದ್ಧಂ ಬ್ರವೀಮಿ ॥೧೦॥

೧೦. ಆದು ಒಂದೇ ಅಲ್ಲ, ಅದಕ್ಕೆ ಎರಡನೆಯದಾದ ಬೇರೊಂದು ಎಲ್ಲಿರಬೇಕು ? ಆದು ಒಂಟಿಯಲ್ಲ, ಮತ್ತೊಂದರ ಜೊತೆಯಿರುವದೂ ಅಲ್ಲ. ಆದು ಶೂನ್ಯವಲ್ಲ, ಅದ್ವೈತವಾಗಿರುವದರಿಂದ ಅಶೂನ್ಯವೂ ಅಲ್ಲ. ಸರ್ವವೇದಾಂತಗಳಲ್ಲಿ ಸಿದ್ಧವಾಗಿರುವ ಆತ್ಮತತ್ತ್ವವನ್ನು ಏನೆಂದು ಹೇಳಲಿ ?

ಇಲ್ಲಿಗೆ ನಿರ್ವಾಣದಶಕವು ಮುಗಿಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Rs 3.00
Sri Vidyabharathi Book Centre, Sringeri